**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ :13.12.2024**

**ಪಾಟೀ ಸವಾಲು - ಪ್ರತಿವಾದಿಗಳ ಪರ ವಕೀಲರಿಂದ :**

ಚಂದ್ರಶೇಖರ್ ರವರು ನಮ್ಮ ಜಮೀನಿನ ಖಾತೆ ನಮಗೆ ಗೊತ್ತಿಲ್ಲದಂತೆ ಅವರ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ದಾಖಲೆಗಳನ್ನು ನೀಡಿರುತ್ತೇನೆ. ಸದರಿ ದಾಖಲೆ ನಿಪಿ-9 ಆಗಿರುತ್ತದೆ. ಅವರು ಮೋಸ ಮಾಡಿರುವ ಬಗ್ಗೆ 2018 ರಲ್ಲಿ ಗೊತ್ತಾಯಿತು. ದಾವ ಸ್ವತ್ತಿನ ಪವತಿ ಖಾತೆ ಮಾಡಿಸಲು ದಾಖಲೆಗಳನ್ನು ತೆಗೆದು ನೋಡಿದ್ದಾಗ ನಮಗೆ ಗೊತ್ತಾಯಿತು. ಆ ಬಗ್ಗೆ ಚಂದ್ರಶೇಖರ್ ರವರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಹಾಗೂ ಪೋಲಿಸ್ ದೂರನ್ನು ದಾಖಲಿಸಿರುವುದಿಲ್ಲ. ಈ ದಾವೆಯ ನಿಪಿ-9 ರಲ್ಲಿ ರುವ ಹೆಸರುಗಳು ನಮ್ಮ ಕುಟುಂಬದ ಸದಸ್ಯರಿಗೆ ಸೇರಿರುತ್ತದೆ ಅವರು ಯಾರು ಸಹ ಹೆಬ್ಬೆರಳು ಗುರುತು ಹಾಕುವುದಿಲ್ಲ. ಸದರಿ ಸಹಿಗಳನ್ನು ನಮ್ಮ ಒಟ್ಟು ಕುಟುಂಬದ ಸದಸ್ಯರು ಮಾಡಿರುತ್ತಾರೆಂದರೆ ಸರಿಯಲ್ಲ. ಆ ಬಗ್ಗೆ ತಿಳಿದುಕೊಳ್ಳಲು ಸದರಿ ದಾಖಲೆಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಯಾವುದೇ ತೊಂದರೆ ಇಲ್ಲ. ವಾದಿಗಳ ವಕಾಲತ್‌ನಲ್ಲಿರುವ ಹೆಬ್ಬೆರಳ ಗುರುತುಗಳು ಮತ್ತು ನಿಪಿ-9 ರಲ್ಲಿರುವ ಹೆಬ್ಬೆರಳ ಗುರುತುಗಳು ಒಂದೇ ಎಂದರೆ ಸರಿಯಲ್ಲ. ನನಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ಹೆಬ್ಬೆರಳ ಗುರುತು ನಮ್ಮ ತಾತನ ಹೆಬ್ಬೆರಳ ಗುರುತು ಎಂದರೆ ಸರಿಯಲ್ಲ. ನನಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ತಹಶೀಲ್ದಾರ್‌ರವರು ದಾವ ಸ್ವತ್ತಿನ ಮಾರಾಟ ಮಾಡಬಹುದೆಂದು ಪರವಾನಿಗೆ ನೀಡಿದ ಪತ್ರ ಎಂದರೆ ನನಗೆ ಗೊತ್ತಿಲ್ಲ. ಕಂದಾಯ ನಿರೀಕ್ಷಕರು ಸ್ಥಳ ತನಿಖೆ ಮಾಡಿ ಸದರಿ ಸ್ವತ್ತನ್ನು ಮಾರಾಟ ಮಾಡಬಹುದು ಎಂದು ವರದಿ ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ಸದರಿ ದಾಖಲೆಗೆ ನಮ್ಮ ತಾತ ರುಜು ಮಾಡಿರುತ್ತಾರೆಂದರೆ ಸರಿಯಲ್ಲ. ಕಂದಾಯ ನಿರೀಕರು ನಮ್ಮ ತಾತನಿಗೆ ಆ ಬಗ್ಗೆ ಚೆಕ್‌ಲಿಸ್ಟ್‌ನ್ನು ಜಾರಿ ಮಾಡಿರುತ್ತಾರೆಂದರೆ ಸರಿಯಲ್ಲ. ತಹಶೀಲ್ದಾರ್‌ರವರು ಮಾರಾಟದ ಪರವಾನಿಗೆ ನೀಡಲು ಅಭ್ಯಂತರ ಇಲ್ಲ ಎಂದು ಉಪವಿಭಾಗಧಿಕಾರಿಗಳಿಗೆ ಪತ್ರ ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ನಮ್ಮ ತಾತ ಚಂದ್ರಶೇಖರ್‌ರವರ ಜೊತೆ ದಾವ ಸ್ವತ್ತಿನ ಮಾರಾಟಕ್ಕಾಗಿ ಕ್ರಯದ ಕರಾರು ಪತ್ರ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ಕ್ರಯದ ಮೊಬಲಗು ಪಡೆದುಕೊಂಡು ನಮ್ಮ ತಾತ ಗೌರಮ್ಮರವರ ಜೊತೆ ಒಂದು ಕ್ರಯದ ಕರಾರು ಪತ್ರ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ಸರ್ವೆ ನಂಬರ್ 87, ಕುಂಬಿಗಾನಹಹಳ್ಳಿ, ಜಂಗಮಕೋಟೆ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ನಮ್ಮ ಕುಟುಂಬದವರ ಹೆಸರಿನಲ್ಲಿ ಇಲ್ಲ. ಸರ್ಕಾರದ ಕಾರ್ಯದರ್ಶಿರವರು ದಾವ ಸ್ವತ್ತನ್ನು ಮಾರಾಟ ಮಾಡಲು ಅನುಮತಿ ಪತ್ರ ನೀಡಿರುತ್ತಾರೆಂದರೆ ಸರಿಯಲ್ಲ.

ದಾವ ಸ್ವತ್ತನ್ನು ಚಂದ್ರಶೇಖರ್‌ರವರಿಗೆ ಮಾಡಲು ಸರ್ಕಾರದಿಂದ ಅನುಮತಿ ಪತ್ರ ನೀಡಲಾಗಿದೆ ಎಂದರೆ ಸರಿಯಲ್ಲ.

**( ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಗಳ ಪರ ವಕೀಲರು ಸಮಯ ಅವಕಾಶ ಕೋರಿದ್ದರಿಂದ ಮುಂದೂಡಲಾಯಿತು)**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**